# ಪೊಲೀಸ್ ಇಲಾಖೆಯ ಬ್ಯಾಕ್ ಟು ಬ್ಯಾಕ್ ಪದಕ ವಿಜೇತ ಕುಸ್ತಿಪಟು ಪ್ರಶಾಂತ್ ಗೌಡ ಬೇಲೇರಿ

ನಮ್ಮ ಸುತ್ತಮುತ್ತಲು ನಡೆಯುವ ಅಹಿತಕರ ಘಟನೆಗಳನ್ನು ನಡೆಯದಂತೆ ನೋಡಿಕೊಳ್ಳುವ ನಮ್ಮನ್ನು ಗಡಿಯೊಳಗೆ ರಕ್ಷಿಸುವ ಇಲಾಖೆಯೇ ಪೊಲೀಸ್ ಇಲಾಖೆ ಇಂತಹ ಪೊಲೀಸ್ ಇಲಾಖೆಯಲ್ಲಿ ಸಾಧಕ ಕ್ರೀಡಾಪಟುಗಳನ್ನು ಆಯ್ಕೆ ಮಾಡಿಕೊಂಡು ಕರ್ತವ್ಯ ನಿರ್ವಹಿಸಲು ಹಾಗೂ ಕ್ರೀಡೆಯಲ್ಲಿ ಸಾಧನೆ ಮಾಡಲು ಕರ್ನಾಟಕ ಸರ್ಕಾರ ಅವಕಾಶ ಮಾಡಿಕೊಟ್ಟಿರುವುದು ಹಾಗೂ ಇತ್ತೀಚೆಗೆ ಹೆಚ್ಚು ಹೆಚ್ಚು ನೇಮಕಾತಿ ಮಾಡಿಕೊಳ್ಳುತ್ತಿರುವುದು ಸ್ವಾಗತಾರ್ಹ.

ಕುಸ್ತಿ ಪಂದ್ಯಗಳು ದೇಹ ತೂಕಕ್ಕೆ ಅನುಗುಣವಾಗಿ ನಡೆಯುತ್ತವೆ ಅದರಲ್ಲಿ ಹೆಚ್ಚಿನ ಎತ್ತರ ಮತ್ತು ಹೆಚ್ಚಿನ ತೂಕ ಇರುವವರು ಹಾಗೂ ಕಡಿಮೆ ಎತ್ತರ ಕಡಿಮೆ ತೂಕ ಇರುವವರು ಇರುತ್ತಾರೆ.

ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಕಡಿಮೆ ಅಂದರೆ 40 ರಿಂದ 55 ಕೆಜಿ ದೇಹತೂಕ 155 ಸೆಂಟಿಮೀಟರ್ ಎತ್ತರದ ಕುಸ್ತಿ ಕ್ರೀಡಾಪಟುಗಳಿಗೆ ಉದ್ಯೋಗಗಳಲ್ಲಿ ಅವಕಾಶ ಕಲ್ಪಿಸಿ ವಿಶೇಷ ಎನಿಸಿಕೊಂಡು ಸಾಕಷ್ಟು ಅವಕಾಶಗಳನ್ನು ನೀಡಿ ಕ್ರೀಡೆಗೆ ಪ್ರೋತ್ಸಾಹಿಸುತ್ತಿದೆ.

ಕಡಿಮೆ ದೇಹ ತೂಕವುಳ್ಳ ಪ್ರಶಾಂತ್ ಗೌಡ ಬೇಲೇರಿ ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಸದ್ಯ ಬ್ಯಾಕ್ ಟು ಬ್ಯಾಕ್ ಮೆಡಲ್ ತಂದು ಕೊಟ್ಟಿರುವ ಕುಸ್ತಿಪಟು.ತಂದೆ ದಿವಂಗತ ಶರಣಗೌಡ ಬೇಲೇರಿ ತಾಯಿ-ಗಿರಿಜಾ ಇವರ ಎರಡನೇ ಮಗನಾಗಿ ಗದಗದ ಲಕ್ಕುಂಡಿ ಇಲ್ಲಿ ಜನಿಸಿದ್ದು ತಂದೆಯೇ ಇವರ ಮೊದಲ ಗುರು ತಾಯಿಯ ಪ್ರೀತಿ,ಲಾಲನೆ,ಪಾಲನೆಯಲ್ಲಿ ಬೆಳೆದು ರಾಷ್ಟ್ರಮಟ್ಟದಲ್ಲಿ ಪದಕ ಪಡೆಯುತ್ತಿದ್ದಾರೆ ಇಂತಹ ಸಾಧನೆಯ ಸಂದರ್ಭದಲ್ಲಿ ತಂದೆಯವರು ಇವರೊಂದಿಗೆ ಇಲ್ಲದಿರು ವುದು ನಿಜಕ್ಕೂ ಬೇಸರದ ಸಂಗತಿ.

ಚಿಕ್ಕವಯಸ್ಸಿನಲ್ಲಿ ತಂದೆಯವರು ಅಣ್ಣನೊಂದಿಗೆ ಗರಡಿ ಮನೆಗೆ ಕಳಿಸಿ ಕೊಡುತ್ತಿದ್ದರು ಆದರೆ ಇವರ ದೇಹ ತೂಕ ವೃದ್ಧಿಸದೆ ಕ್ರೀಡಾ ವಸತಿ ನಿಲಯದಲ್ಲಿ ತರಬೇತಿ ಪಡೆಯಲಾಗದೆ ಹೊರ ಉಳಿಯುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಧೃತಿಗೆಡದ ಇವರು ತಂದೆಯವರ ಮಾರ್ಗದರ್ಶನದಲ್ಲಿ ತೂಕವನ್ನು ವೃದ್ಧಿಸಿ ಸರಿಯಾದ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಪಡೆದುಕೊಂಡು 16 ವರ್ಷ ವಯೋಮಿತಿ ಒಳಗಿನ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಪದಕ ಪಡೆಯುತ್ತಾರೆ ನಂತರ ಸಾಯಿ ವಸತಿ ಕುಸ್ತಿ ಕ್ರೀಡಾ ನಿಲಯ ಧಾರವಾಡ ಇಲ್ಲಿಗೆ ಆಯ್ಕೆಗೊಳ್ಳುತ್ತಾರೆ ಆಗ ಹತ್ತನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ.

ತಮ್ಮ ಕ್ರೀಡಾ ಜೀವನದಲ್ಲಿ ತಂದೆಯವರ ಮಾರ್ಗದರ್ಶನ, ಧಾರವಾಡ ಸಾಯಿ ಕುಸ್ತಿ ಹಾಸ್ಟೆಲ್ಲಿನ ತರಬೇತುದಾರರಾದ ಶ್ರೀನಿವಾಸ್ ಗೌಡರವರ,ಜೆ ಎಸ್ ಡಬ್ಲ್ಯೂ ಇಲ್ಲಿನ ತರಬೇತುದಾರರಾದ ಡೆಮಿನ್ ಹಾಗೂ ಇರಾನ್ ದೇಶದ ಅಮಿರ್ ಕೋಚ್ ಇವರ ಸಹಕಾರದಿಂದ ನಾನು ಈ ಮಟ್ಟಕ್ಕೆ ಬೆಳೆದಿದ್ದೇನೆ ಎಂಬುದನ್ನು ನೆನಪಿಸಿಕೊಳ್ಳುತ್ತಾರೆ.



ಕ್ರೀಡೆಯ ಸಾಧನೆಯ ಅಡಿಯಲ್ಲಿ 2023ರಲ್ಲಿ ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಕಾನ್ಸ್ಟೇಬಲ್ ಆಗಿ ಉದ್ಯೋಗವನ್ನು ಪಡೆದುಕೊಂಡು ಬೆಂಗಳೂರು ಹೈ ಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಾ ದಾವಣಗೆರೆಯ ಕುಸ್ತಿ ಹಾಸ್ಟೆಲ್ನಲ್ಲಿ ತರಬೇತಿಯನ್ನು ಮುಂದುವರಿಸುತ್ತಾ ಮುಂಬರುವ ವಿಶ್ವ ಪೊಲೀಸ್ ಕ್ರೀಡಾಕೂಟದಲ್ಲಿ ಪದಕ ಪಡೆಯುವ ಕನಸನ್ನು ಹೊಂದಿದ್ದಾರೆ.

ಪೊಲೀಸ್ ಇಲಾಖೆ ಸಾಕಷ್ಟು ಪ್ರೋತ್ಸಾಹವನ್ನು ನೀಡುತ್ತಿದ್ದು ಮುಂದಿನ ದಿನಗಳಲ್ಲಿ ಇನ್ನಷ್ಟು ವಿಶೇಷ ಸೌಲಭ್ಯಗಳನ್ನು ನೀಡಲಿದ್ದು ನಮ್ಮಂತ ಅದೆಷ್ಟು ಕ್ರೀಡಾಪಟುಗಳನ್ನು ಮುನ್ನೆಲೆಗೆ ತರುವ ಕಾರ್ಯವನ್ನು ಮಾಡುತ್ತಿದೆ ಎಲ್ಲಾ ಕ್ರೀಡಾಪಟುಗಳ ಪರವಾಗಿ ಇಲಾಖೆಗೆ ಅಭಿನಂದನೆಗಳನ್ನು ಸಲ್ಲಿಸುತ್ತಾರೆ ಪ್ರಶಾಂತ್. ನಮ್ಮ ಇಲಾಖೆಯ ಮಾದರಿಯಲ್ಲಿಯೇ ಇತರೆ ಸರ್ಕಾರಿ ಇಲಾಖೆಗಳಲ್ಲಿ ಕ್ರೀಡಾಪಟುಗಳನ್ನು ಸಾಧನೆ ಆಧಾರದ ಮೇಲೆ ಉದ್ಯೋಗಕ್ಕೆ ಆಯ್ಕೆ ಮಾಡಿಕೊಂಡರೆ ಇನ್ನಷ್ಟು ಕ್ರೀಡಾಪಟುಗಳಿಗೆ ಅನುಕೂಲವಾಗಲಿದೆ ಎನ್ನುತ್ತಾರೆ ಸಾಧಕ.

ಒಬ್ಬ ಕುಸ್ತಿ ಕ್ರೀಡಾಪಟು ತಾನು ಉತ್ತಮ ಸಾಧನೆಯನ್ನು ಮಾಡಬೇಕಾದರೆ ಒಳ್ಳೆಯ ತರಬೇತಿಯನ್ನು ಪಡೆದುಕೊಳ್ಳಬೇಕು ಆಗ ಮಾತ್ರ ಮುಂಚೂಣಿಯ ಸಾಧನೆ ಮಾಡಲು ಸಾಧ್ಯ ಇದರೊಂದಿಗೆ ಪೋಷಕರ ಸಹಕಾರ ಹಾಗೂ ಸರಿಯಾದ ಸಮಯದಲ್ಲಿ ಅಂದರೆ 18ರ ನಂತರ 20ರ ಒಳಗೆ ನೌಕರಿಯನ್ನು ಪಡೆದುಕೊಂಡರೆ ಅಥವಾ ಸರ್ಕಾರ ಅಂತವರನ್ನು ಗುರುತಿಸಿ ಖಾಯಂ ನೌಕರಿಯನ್ನು ನೀಡಿದರೆ ಕ್ರೀಡೆ ಉಳಿಸಿ ಬೆಳೆಸಲು ಸಾಧ್ಯವಾಗುತ್ತದೆ ಈ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕು ಎಂದು ವಿನಂತಿಸುತ್ತಾ ಕ್ರೀಡಾ ಸಾಧಕರು ಕೇವಲ ಕ್ರೀಡೆಯನ್ನು ಮಾತ್ರ ಮುಂದುವರಿಸದೆ ಜೊತೆಜೊತೆಗೆ ವಿದ್ಯಾಭ್ಯಾಸದ ಕಡೆಗೂ ಗಮನ ಕೊಡಬೇಕು ಆಗ ಮಾತ್ರ ನೌಕರಿಗಳಲ್ಲಿ ಬಡ್ತಿ ಪಡೆಯಲು ಸಾಧ್ಯವಾಗುತ್ತದೆ.ಬೇರೆ ರಾಜ್ಯಗಳಲ್ಲಿ ಸಾಧನೆಗೆ ಅನುಸಾರವಾಗಿ ಮುಂಬಡ್ತಿ ನೀಡುತ್ತಿದ್ದು ನಮ್ಮ ಸರ್ಕಾರವೂ ಸಹ ನಮ್ಮ ಸಾಧನೆಗೆ ಅನುಗುಣವಾಗಿ ಮುಂಬಡ್ತಿ ನೀಡಬೇಕೆಂದು ಕೇಳಿಕೊಳ್ಳುತ್ತಾರೆ.

ಕಠಿಣ ಪರಿಶ್ರಮ,ಶ್ರದ್ಧೆ ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಂಡು ತಮಗೆ ಅನ್ನವಿತ್ತ ಇಲಾಖೆಗೆ ಗೌರವ ತಂದು ಕೊಡುವುದು ನಮ್ಮ ಕರ್ತವ್ಯ ಎಂದು ತಿಳಿಸುತ್ತಾರೆ ಪ್ರಶಾಂತ್. ನಿಮ್ಮೆಲ್ಲಾ ಕನಸುಗಳು ನೆರವೇರಲಿ ಆದಷ್ಟು ಬೇಗ ಪೊಲೀಸ್ ಇಲಾಖೆಗೆ ನಿಮ್ಮಿಂದ ವಿಶ್ವ ಪೊಲೀಸ್ ಕ್ರೀಡಾಕೂಟದ ಪದಕ ದೊರಕಲಿ ಎಂದು ಹಾರೈಸುತ್ತೇವೆ.

## ಕ್ರೀಡಾ ಸಾಧನೆಗಳು

2024 (ಉತ್ತರ ಪ್ರದೇಶ)ಆಲ್ ಇಂಡಿಯಾ ಪೊಲೀಸ್ ಗೇಮ್ಸ್ ಕುಸ್ತಿ ಪಂದ್ಯಾವಳಿಯಲ್ಲಿ 57 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.

2023 (ಹರಿಯಾಣ) ಆಲ್ ಇಂಡಿಯಾ ಪೊಲೀಸ್ ಗೇಮ್ಸ್ ಕುಸ್ತಿ ಸ್ಪರ್ಧೆಯಲ್ಲಿ 57 ಕೆಜಿ ದೇಹ ತೂಕ ವಿಭಾಗದಲ್ಲಿ ಬೆಳ್ಳಿ ಪದಕ.

2022 (ತಮಿಳುನಾಡು)ಸೌತ್ ಜೋನ್ ಸೀನಿಯರ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ 57 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ.

2021 (ಆಗ್ರಾ) ಟ್ರೆಡಿಷಿನಲ್ ಸೀನಿಯರ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ 57 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.

2019 (ತಮಿಳುನಾಡು) ಸೌತ್ ಜೋನ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ 57 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ.

2017 (ಪಾಟ್ನಾ) ಜೂನಿಯರ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ 50 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.

2016 ದೆಹಲಿಯಲ್ಲಿ ನಡೆದ 19 ವರ್ಷ ವಯೋಮಾನದ ಒಳಗಿನ ಎಸ್ ಜಿ ಎಫ್ ಐ ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ 59 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.

2015(ಜಾರ್ಖಂಡ್)ಸಬ್ ಜೂನಿಯರ್ ರೆಸ್ಲಿಂಗ್ ಚಾಂಪಿಯನ್ಶಿಪ್ 46 ಕೆಜಿ ದೇಹ ತೂಕ ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಕಂಚಿನ ಪದಕ.

2012 (ಹರಿಯಾಣ) 16 ವರ್ಷ ವಯೋಮಿತಿಯೊಳಗಿನ ರೂರಲ್ ನ್ಯಾಷನಲ್ ರೆಸ್ಲಿಂಗ್ ಚಾಂಪಿಯನ್ಶಿಪ್ 42 ಕೆಜಿ ದೇಹ ತೂಕ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ ಇವರು ಫ್ರೀ ಸ್ಟೈಲ್ ಮಾದರಿಯ ಕುಸ್ತಿಯಲ್ಲಿ ಪಾಲ್ಗೊಂಡಿರುತ್ತಾರೆ.

2023ರಲ್ಲಿ ಕನಕಪುರದಲ್ಲಿ ನಡೆದ ಆಹ್ವಾನಿತ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ ಬೆಳ್ಳಿಗದೆಯೊಂದಿಗೆ ಕನಕಪುರ ಕಿಶೋರ ಪ್ರಶಸ್ತಿ ಪಡೆದಿರುತ್ತಾರೆ.

## ಕವಿ ಮನಸು

### ಸಾವಿರ ಪ್ರಶ್ನೆಗೆ ಒಂದೇ ಉತ್ತರ ಮೌನ..

ಎಲ್ಲಕಿಂತ ಮಿಗಿಲಾದ ನೆಮ್ಮದಿ
ಮೌನ.....
ತನ್ನನ್ನು ತಾನು ಅರಿಯಲು ಬೇಕಾದ ಅಸ್ತ್ರ
ಮೌನ ....
ಬೆಲೆ ಕಟ್ಟಲಾಗದ ಅದ್ಭುತ ಶಕ್ತಿ
ಮೌನ....
ಏಕಾಂತದಲ್ಲಿ ಧ್ಯಾನ ಮಾಡಿದಾಗ
ಫಲಿಸುವ ಯಶಸ್ಸು ಮೌನ....
ತಾಳ್ಮೆಯ ಆಸೆ ಆಶಯವಾಗಿ ಫಲಿಸುವ
ಶಕ್ತಿ ಮೌನ.....
ಸಾವಿರ ಸಮಸ್ಯೆಗೆ ಸಿಗುವ ಉತ್ತರ
ಮೌನಿಯ ಮೌನ.....
ವ್ಯಕ್ತ ಪಡಿಸಲಾರದ ಸವಾಲಿನ
ಪ್ರಶ್ನೆಗೆ ಉತ್ತರ ಮೌನ.....

– ನಂದಿನಿ ಸನಬಾಳ್

### ಗೌರವದ ಬದುಕು?

ತಾಯಿ ತಂದೆಯರನ್ನು
ಬದುಕಿರುವಾಗಲೇ..
ಗೌರವಿಸಿ ನೋಡಿಕೊ.

ಇಲ್ಲವಾದರೆ ಅವರು
ಬದುಕೀಯೂ ಸತ್ತಂತೆ
ಜೀವಿಸುತ್ತಾರೆ.

ಅವರು ಸತ್ತನಂತರ
ಕಳಕಳಿಯ ಶ್ರಾದ್ಧ
ಕರ್ಮಾದಿಗಳು ಸರಿಯೆ?

ಒಂದೊಮ್ಮೆ ಅದನ್ನೂ
ಮಾಡದಿದ್ದರೆ..ಸತ್ತವರನ್ನೇ
ಮತ್ತೆ ಮತ್ತೆ ಕೊಂದಂತೆ.

– ಲಕುಮಿಸುತ ಸಾರವಾಡ

### ಎಲ್ಲಿದ್ದರೇನು?

ಕಷ್ಟಕ್ಕೆ ಬಾರದ
ಇಷ್ಟಕ್ಕೆ ಇರದ
ಮಕ್ಕಳು ಎಲ್ಲಿದ್ದರೇನು?

ಮನೆಯ ಬಿಟ್ಟ
ಮನಸು ಕೆಟ್ಟ
ಮಂದಿ ಎಲ್ಲಿದ್ದರೇನು?

ವಿಚಾರಮಾಡದ
ನೀತಿಯಲಿ ನೆಡೆಯದ
ಬಂಧಗಳು ಎಲ್ಲಿದ್ದರೇನು?

ನೋವು ಹಂಚಿಕೊಳ್ಳದ
ನಲಿವ ಹೇಳಿಕೊಳ್ಳದ
ಸ್ನೇಹ ಎಲ್ಲಿದ್ದರೇನು?

ವಿದ್ಯೆ ಕಲಿಸದ
ತಿದ್ದಿ ಹೇಳದ
ಗುರುವು ಎಲ್ಲಿದ್ದರೇನು?

- GRB

## ಡಿಪ್ಲೋಮಾ ದ್ವಿತೀಯ ವರ್ಷ ಪ್ರವೇಶಾತಿಗೆ ಆಫ್‌ಲೈನ್ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಬಳ್ಳಾರಿ

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2025-26ನೇ ಸಾಲಿಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮೂಲಕ ದ್ವಿತೀಯ ವರ್ಷದ 3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಐ.ಟಿ.ಐ ಮತ್ತು ದ್ವಿತೀಯ ಪಿ.ಯು.ಸಿ(ವಿಜ್ಞಾನ/ತಾಂತ್ರಿಕ ವಿಷಯಗಳಲ್ಲಿ) ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಕಾಲೇಜಿನಲ್ಲಿ ಪಡೆದುಕೊಂಡು ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿ ಅರ್ಜಿಗಳನ್ನು ಪಾಲಿಟೆಕ್ನಿಕ್‌ನ ಪ್ರಾಂಶುಪಾಲರ ಕಚೇರಿಗೆ ಜೂನ್ 14 ಸಂಜೆ 05 ಗಂಟೆಯವರೆಗೆ ಸಲ್ಲಿಸಬಹುದು.

ಜೂನ್ 16 ರಂದು ಬೆಳಿಗ್ಗೆ 11 ಗಂಟೆಗೆ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟ, ಅಂದು ಸಂಜೆ 03 ರ ವರೆಗೆ ತಿದ್ದುಪಡಿಗೆ ಅವಕಾಶ, ಸಂಜೆ 05 ಗಂಟೆಯವರೆಗೆ ಅಂತಿಮ ಮೆರಿಟ್ ಪಟ್ಟಿ ಪ್ರಕಟಿಸಲಾಗುವುದು. ಜೂನ್ 17 ರಿಂದ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಲಿದೆ. ಹೆಚ್ಚಿನ ಮಾಹಿತಿಗಾಗಿ ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ನ ಪ್ರಾಚಾರ್ಯರ ಕಚೇರಿ ಅಥವಾ ದೂ.08392-242228 ಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಪಾಲಿಟೆಕ್ನಿಕ್ ನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜೂನ್.8 ರವರೆಗೆ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ ಅವಧಿ ವಿಸ್ತರಣೆ.

ಹಂಪಿ ಟೈಮ್ಸ್ ಹೊಸಪೇಟೆ

2025-26ನೇ ಸಾಲಿನ ಪರಿಶಿಷ್ಟ ಜಾತಿಯ ಸಮಗ್ರ ಸಮೀಕ್ಷೆ ಜೂನ್.02 ರಿಂದ ಜೂನ್.08 ರವರೆಗೆ ಸಮೀಕ್ಷೆ ಬ್ಲಾಕ್ ವ್ಯಾಪ್ತಿಯಲ್ಲಿ ವಿಸ್ತರಿಸಿದೆ ಹಾಗೂ ಆನ್ ಲೈನ್ ಮೂಲಕ ಜೂನ್.08 ರವರೆಗೆ ಸ್ವಯಂ ಘೋಷಣೆ ನೋಂದಾಯಿಸಲು ಅವಕಾಶ ನೀಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಸಾರ್ವಜನಿಕರ ಅನುಕೂಲಕ್ಕಾಗಿ ಈಗಾಗಲೇ ಜಿಲ್ಲಾಮಟ್ಟದಲ್ಲಿ ಸಮಾಜ ಕಲ್ಯಾಣ ಇಲಾಖೆ ಜಂಟಿನಿರ್ದೇಶಕರ ಕಚೇರಿ ವಿಜಯನಗರ ಹಾಗೂ ವಿಧಾನಸಭಾ ಕ್ಷೇತ್ರವಾರು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಕಂಟ್ರೋಲ್ ರೂಂ ಗಳನ್ನು ಸ್ಥಾಪಿಸಲಾಗಿದೆ. ವಿಜಯನಗರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಜಿಲ್ಲಾ ನೋಡಲ್ ಅಧಿಕಾರಿ ಹಾಗೂ ಜಿಲ್ಲಾ ಅಧಿಕಾರಿಗಳು ಕೆ.ಬಿ.ರಾಮಚಂದ್ರಪ್ಪ ಮೊ.9141827465, ವಿಜಯನಗರ ರಮೇಶ್ ಮೊ.80950 02829, ಹೊಸಪೇಟೆ ನಜೀಮಾ ಭಾನು ಮೊ. 9108777499, ಹಗರಿಬೊಮ್ಮನಹಳ್ಳಿ ಆನಂದ.ವೈ.ಡೊಳ್ಳಿನ ಮೊ.9901980762, ಕೂಡ್ಲಿಗಿ ಶಾಹೇಖಾ ಅಹ್ಮದಿ ಮೊ.8105909630, ಹಡಗಲಿ ಜ್ಯೋತಿ ಮೊ.9482608061, ಹರಪನಹಳ್ಳಿ ಎಸ್, ಆರ್,ಗಂಗಪ್ಪ ಮೊ.9739094433 ಸಮೀಕ್ಷೆಯ ಬಗ್ಗೆ ಮಾಹಿತಿ ಪಡೆಯಲು ಕಂಟ್ರೋಲ್ ರೂಂ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಬೇಕೆಂದು ತಿಳಿಸಿದ್ದಾರೆ.

## ವಿಕಲಚೇತನರ ಆರೈಕೆದಾರರಿಂದ ಪ್ರೋತ್ಸಾಹಧನಕ್ಕೆ ಅರ್ಜಿ ಅಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

2025-26ನೇ ಸಾಲಿನಲ್ಲಿ ವಿಕಲಚೇತನರ ಹಾಗೂ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಮೆದುಳಿನ ದುರ್ಬಲತೆ, ಆಟಿಸಂ, ಬೌದ್ಧಿಕ ವಿಕಲತೆ ಮತ್ತು ಬಹುವಿಧದ ಅಂಗವಿಕಲತೆ (ಶ್ರವಣ ಮತ್ತು ದೃಷ್ಟಿ ನ್ಯೂನತೆ) ಇರುವ ಶೇ.75 ಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ವ್ಯಕ್ತಿಗಳ ಆರೈಕೆ ಮಾಡುವವರಿಗೆ ಮಾಹೆಯಾನ ರೂ.1000 ಗಳ ಪ್ರೋತ್ಸಾಹಧನ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ರಾಮಾಂಜನೇಯ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಜಿಲ್ಲಾ ಅಂಗವಿಕರ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ಆಯಾ ಗ್ರಾಪಂ ವಿಆರ್‌ಡಬ್ಲ್ಯೂ, ನಗರಸಭೆಯ ಯುಆರ್‌ಡಬ್ಲ್ಯೂ ಹಾಗೂ ತಾಪಂಯ ಎಂಆರ್‌ಡಬ್ಲ್ಯೂ ಕೇಂದ್ರಗಳಲ್ಲಿ ಅರ್ಜಿಗಳನ್ನು ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಜಿಲ್ಲಾ ಅಂಗವಿಕರ ಕಲ್ಯಾಣಾಧಿಕಾರಿಗಳ ಕಚೇರಿಗೆ ಜೂ.03 ರಿಂದ 30 ರೊಳಗೆ ಸಲ್ಲಿಸಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆಯ ಎಂಆರ್‌ಡಬ್ಲ್ಯೂ ಜೆ.ರವಿಕುಮಾರ ನಾಯಕ ಮೊ.994525991, ಹರಪನಹಳ್ಳಿಯ ಎಂಆರ್‌ಡಬ್ಲ್ಯೂ ಆರ್. ಧನರಾಜ್ ಮೊ.9901182525, ಹಗರಿಬೊಮ್ಮನಹಳ್ಳಿ ಎಂಆರ್‌ಡಬ್ಲ್ಯೂ ಲಕ್ಷ್ಮಣ ಮೊ.97411 85924, ಕೂಡ್ಲಿಗಿ ಎಂಆರ್‌ಡಬ್ಲ್ಯೂ ಬಿ.ಹೆಚ್.ಚೌಡೇಶ ಮೊ.8217626361, ಹಡಗಲಿ ಎಂಆರ್‌ಡಬ್ಲ್ಯೂ ಮಂಜುನಾಥ ಮೊ.9900890403 ಮತ್ತು ಕೊಟ್ಟೂರು ಎಂಆರ್‌ಡಬ್ಲ್ಯೂ ಕೆ.ಲಕ್ಷ್ಮೀ ಮೊ.82968 59012 ಸಂಖ್ಯೆಗೆ ಹಾಗೂ ಜಿಲ್ಲಾ ಅಂಗವಿಕರ ಕಲ್ಯಾಣಾಧಿಕಾರಿಗಳ ಕಾರ್ಯಾಲಯವನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

## ಜೂನ್ 04 ಮತ್ತು 06ರಂದು ಅಹವಾಲು ಸಭೆ

ಹಂಪಿ ಟೈಮ್ಸ್ ಚಿತ್ರದುರ್ಗ

ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಾಗರ ಜಲಾಶಯದ ಗರಿಷ್ಠ ಮಟ್ಟ 130 ಅಡಿ ತಲುಪಿದಾಗ ಹಿನ್ನೀರಿನಲ್ಲಿ ಮುಳುಗಡೆಯಾದ ಯಾವುದಾದರೂ ಪಟ್ಟ ಜಮೀನುಗಳಿದ್ದಲ್ಲಿ ಮತ್ತು ಅಂತಹ ಜಮೀನುಗಳಿಗೆ ಈ ಹಿಂದೆ ಭೂ ಪರಿಹಾರ ವಿತರಿಸದೇ ಇದ್ದಲ್ಲಿ ಅಂತಹ ಜಮೀನುಗಳನ್ನು ಪರಿಶೀಲಿಸುವ ಸಂಬಂಧ ಹಿನ್ನೀರಿನ ಅಂಚಿನಲ್ಲಿರುವ ಗ್ರಾಮಗಳಿಗೆ ಇದೇ ಜೂನ್ 04 ಮತ್ತು 06ರಂದು ಜಲಸಂಪನ್ಮೂಲ ಇಲಾಖೆಯ ವಿಶ್ವೇಶ್ವರಯ್ಯ ಜಲನಿಗಮ ನಿಯಮಿತ ಭದ್ರಾ ಮೇಲ್ದಂಡೆ ಯೋಜನೆಯ ಇಂಜಿನಿಯರ್‌ಗಳು, ಕಂದಾಯ ಇಲಾಖೆಯ ತಹಶೀಲ್ದಾರ್, ಗ್ರಾಮ ಆಡಳಿತಾಧಿಕಾರಿಗಳು, ಶಿರಸ್ತೆದಾರರು ಹಾಗೂ ಇತರೆ ಅಧಿಕಾರಿಗಳ ತಂಡ ಅಹವಾಲು ಸಭೆಯನ್ನು ಹಿನ್ನೀರಿನ ಅಂಚಿನಲ್ಲಿರುವ ಗ್ರಾಮ ಪಂಚಾಯಿತಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜೂನ್ 04ರಂದು ಬೆಳಿಗ್ಗೆ 11 ರಿಂದ 12.30 ರವರೆಗೆ ಲಕ್ಕಿಹಳ್ಳಿ, ಮಧ್ಯಾಹ್ನ 1 ರಿಂದ 3.30 ರವರೆಗೆ ಅತ್ತಿಮಗ್ಗೆ ಹಾಗೂ ಸಂಜೆ 4 ರಿಂದ 5.30 ರವರೆಗೆ ಹುಣವಿನಡುವಿನಲ್ಲಿ ಅಹವಾಲು ಸಭೆ ನಡೆಯಲಿದೆ.

ಜೂನ್ 06ರಂದು ಬೆಳಿಗ್ಗೆ 11 ರಿಂದ 12.30 ರವರೆಗೆ ಕಾರೇಹಳ್ಳಿ, ಮಧ್ಯಾಹ್ನ 1 ರಿಂದ 3.30 ರವರೆಗೆ ಮತ್ತೋಡು ಹಾಗೂ ಸಂಜೆ 4 ರಿಂದ 5.30 ರವರೆಗೆ ಜಿ.ಎನ್.ಕೆರೆ ಗ್ರಾಮದಲ್ಲಿ ಸಭೆ ನಡೆಯಲಿದೆ.

ಹಿನ್ನೀರಿನಿಂದ ಮುಳುಗಡೆಯಾಗಿರುವ ರೈತರು ಸಭೆಗೆ ಹಾಜರಾಗಿ ಅಹವಾಲುಗಳನ್ನು ನೀಡಬಹುದಾಗಿದೆ ಎಂದು ಹೊಸದುರ್ಗ ವಿಶ್ವೇಶ್ವರಯ್ಯ ಜಲ ನಿಗಮದ ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.4ರ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆ ತಿಳಿಸಿದ್ದಾರೆ.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಾತಿಗೆ ಅರ್ಜಿ ಆಹ್ವಾನ

### ಕೂಡ್ಲಿಗಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಮಾಹಿತಿ

ಹಂಪಿ ಟೈಮ್ಸ್ ಕೂಡ್ಲಿಗಿ

2025-26ನೇ ಸಾಲಿನಲ್ಲಿ ಕೂಡ್ಲಿಗಿ ಹಾಗೂ ಕೊಟ್ಟೂರು ತಾಲೂಕಿನ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ 5 ರಿಂದ 10ನೇ ತರಗತಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಕೂಡ್ಲಿಗಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು ಜೂ.16 ರೊಳಗೆ https://shp.karnataka.gov.in ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ತಾಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್ ಸೈಟ್ https://bcwd.karnataka.gov.in/ ನ್ನು ನೋಡಬಹುದು ಮತ್ತು ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇಮೇಲ್ ಮೂಲಕ ಅಥವಾ ತಾಲೂಕು ಕೂಡ್ಲಿಗಿ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಸಹಾಯವಾಣಿ ಸಂಖ್ಯೆ 08391220583 8050770004 ಮತ್ತು 8050770005 ಗೆ ಸಂಪರ್ಕಿಸಬಹುದು.

ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹೊಸಹಳ್ಳಿ, ಚಂದ್ರಶೇಖರಪುರ, ಚಿಕ್ಕಜೋಗಿಹಳ್ಳಿ, ಹಿರೇಹೆಗ್ಡಾಳ್, ಕೊಟ್ಟೂರು, ನಿಂಬಳಗೆರೆ, ಕೂಡ್ಲಿಗಿ, ಗುಡೇಕೋಟೆ. ಹಾಗೂ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಹೊಸಹಳ್ಳಿ, ಉಜ್ಜಿನಿ ಮತ್ತು ಕೂಡ್ಲಿಗಿಯ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾತಿಗಳು ಆರಂಭವಾಗಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ತಾಲೂಕು ಸಾರ್ವಜನಿಕ ಆಸ್ಪತ್ರೆ, ಹಗರಿಬೊಮ್ಮನಹಳ್ಳಿ.ವಿಜಯನಗರ(ಜಿಲ್ಲೆ)
583212 ದೂ.ಸಂ.: 08397-238222 ಇ-ಮೇಲ್;cmoghhbh@gmail.com
ಸಂಖ್ಯೆ:, ತಾ.ಸಾ.ಆ.(ಹ.ಬೊ)/ಟೆಂಡರು/ಹೊ.ಗುತ್ತಿಗೆ-ಗ್ರೂಪ್ ಡಿ & ನಾನ್ ಕ್ಲಿನಿಕಲ್/74/2025-26 ದಿನಾಂಕ : 30.05.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕಾಲ್-2)

ತಾಲೂಕು ಸಾರ್ವಜನಿಕ ಆಸ್ಪತ್ರೆ ಹಗರಿಬೊಮ್ಮನಹಳ್ಳಿ, ವಿಜಯನಗರ (ಜಿಲ್ಲೆ) ಕೇಂದ್ರದ 2025-26 ನೇ ಸಾಲಿನ ಖಾಲಿ ಇರುವ ಗ್ರೂಪ್ ಡಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ ಡಿ ಮತ್ತು ನಾನ್-ಕ್ಲಿನಿಕಲ್ ಸಿಬ್ಬಂದಿಯವರನ್ನು ಪೂರೈಸಲು ಖಾಸಗಿ ಸಂಸ್ಥೆಗಳಿಂದ ಇ-ಪ್ರೋಕ್ಯೂರ್ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಟೆಂಡರ್ (ಕಾಲ್-2) ಕರೆಯಲಾಗಿದೆ. ಇ-ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ **http://kppp.karnataka.gov.in** ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯವಿರುತ್ತದೆ. ಆನ್‌ಲೈನ್‌ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ 18.06.2025 ಸಂಜೆ 04:00** ಗಂಟೆಯವರೆಗೆ ನಿಗಧಿ ಪಡಿಸಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕ ದಿಂದ ( ಟೆಂಡರ್ ಅವಧಿಯು ಕಾರ್ಯದೇಶ ನೀಡುವ ದಿನಾಂಕ ದಿಂದ "ವಿಜಯನಗರ ಜಿಲ್ಲಾ ಕಾರ್ಮಿಕರ ಸೇವೆಗಳ ವಿವಿದೊದ್ದೇಶ ಸಹಕಾರ ಸಂಘ " ಕಾರ್ಯರೂಪಕ್ಕೆ ಬರುವವರೆಗೆ ಅಥವಾ ಸದರಿ ಟೆಂಡರ್‌ನ ಅವಧಿ **ದಿನಾಂಕ: 31.03.2026** ರ ವರೆಗೆ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಅನ್ವಯವಾಗುವಂತೆ) ಮಾತ್ರ ಇರುತ್ತದೆ.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು, ತಾಲೂಕು ಸಾರ್ವಜನಿಕ ಆಸ್ಪತ್ರೆ,ಹಗರಿಬೊಮ್ಮನಹಳ್ಳಿ. ಹೆಚ್.ಬಿ.ಹಳ್ಳಿ(ತಾ),ವಿಜಯನಗರ(ಜಿಲ್ಲೆ).
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/80